# ಕರ್ನಾಟಕದ ರಾಮಕೃಷ್ಣ ಮಠಗಳಲ್ಲಿ ನಡೆಯುವ ವ್ಯಕ್ತಿತ್ವ ವಿಕಸನ ಹಾಗೂ ಯುವ ತರಬೇತಿ

ಸ್ವಾಮಿ ಶಾಂತಿವ್ರತಾನಂದ

ಸ್ವಾಮಿ ವಿವೇಕಾನಂದರು ಬಯಸಿದಂತೆ ಯುವಜನತೆಗೆ ಸರಿಯಾದ ತರಬೇತಿ ನೀಡಬಲ್ಲ ಹಲವು ಕಾರ್ಯಕ್ರಮಗಳನ್ನು ರಾಮಕೃಷ್ಣ ಮಹಾಸಂಘದ ಕೇಂದ್ರಗಳು ನಡೆಸಿಕೊಂಡು ಬರುತ್ತಿವೆ. ಈ ಬಗ್ಗೆ ವಿವರಿಸಿರುವ ಲೇಖಕರು ಉತ್ತಮ ವಾಗ್ಮಿಗಳು ಮತ್ತು ಲೇಖಕರು; ಪ್ರಸ್ತುತ ಅವರು ಐರ್ಲೆಂಡಿನ ಡಬ್ಲಿನ್ ಕೇಂದ್ರದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕೆಲವು ಗ್ರಂಥಗಳನ್ನೂ ರಚಿಸಿರುವ ಅವರು 'ವಿವೇಕಪ್ರಭ'ದಲ್ಲಿ ಅನೇಕ ಸ್ಫೂರ್ತಿದಾಯಕ ಲೇಖನಗಳನ್ನು ಬರೆದಿದ್ದಾರೆ.



ವಿವೇಕಾನಂದ ಬಾಲಕ ಸಂಘ, ರಾಮಕೃಷ್ಣ ಮಠ, ಬೆಂಗಳೂರು

ವಿಶ್ವವಿಜೇತ ವಿವೇಕಾನಂದರನ್ನು ಅಮೆರಿಕಾ ದೇಶದಲ್ಲಿ ಜನರು ನಾ ಮುಂದು, ತಾ ಮುಂದು ಎಂದು ಭೇಟಿಯಾಗಲು ಮುಗಿ ಬೀಳುತ್ತಿದ್ದರು. ಉಪನ್ಯಾಸ ಮುಗಿದ ಮೇಲೆ ನೂರಾರು ಜನರು ಅವರ ಕೈಯನ್ನು ಕುಲುಕಲು, ಅವರ ಬಟ್ಟೆಗೆ ಮುತ್ತಿಟ್ಟು ಗೌರವ ತೋರಿಸಲು, ಒಮ್ಮೆ ಹತ್ತಿರದಿಂದ ನೋಡಿ ಕೃತಾರ್ಥರಾಗೋಣ ಎಂದು ಧಾವಿಸುತ್ತಿದ್ದರು. ಅವರಲ್ಲಿ ಅನೇಕ ಪಾಶ್ಚಾತ್ಯ ಯುವ ಮಹಿಳೆ ಯರು ಯುವ ಸ್ವಾಮಿ ವಿವೇಕಾನಂದರಂತಹ ಪತಿಯನ್ನು ಪಡೆ ಯಲು ಆಶಿಸಿದರು. ಆದರೆ, ಇವರ ನಡುವೆ ಸ್ವಾಮಿ ವಿವೇಕಾ ನಂದರ ಪಾವಿತ್ರ್ಯ, ತ್ಯಾಗ-ವೈರಾಗ್ಯಗಳ ಮಹಾಜ್ವಾಲೆ ಕೊಂಚವೂ ಕಡಿಮೆಯಾಗಲಿಲ್ಲ.

ಒಮ್ಮೆ ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ಮಹಿಳೆಯ ಬಳಿ, 'I have fallen with love' ಎಂದರು. ತಕ್ಷಣವೇ ಬೆರಗಾದ ಆ ಮಹಿಳೆಯು ''ಯಾರು ಆ ಅದೃಷ್ಟವಂತೆ! ಸ್ವಾಮೀಜಿ'' ಎಂದಳು. ಸ್ವಾಮೀಜಿ ''I have fallen love with organisation'' ಎಂದು ನಗುತ್ತಾ ನುಡಿದರು. ದೇಶದಲ್ಲಿ ಯಾವುದೇ ಮಹತ್ತರ ಬದಲಾವಣೆಯನ್ನು ತರಬೇಕಾದರೆ, ಅದು ಹೆಚ್ಚುಕಾಲ ನಿಲ್ಲಬೇಕಾ ದರೆ ಸಂಘಟನೆ ಬೇಕೇ ಬೇಕು ಎಂದು ತಿಳಿದಿದ್ದರು. ಪ್ರತಿಫಲವಾಗಿ ೧೮೯೭ರ ಮೇ ೧ರಂದು ಅಧಿಕೃತವಾಗಿ ರಾಮಕೃಷ್ಣ ಮಿಷನ್ ಪ್ರಾರಂಭವಾಯಿತು. ೧೨೭ ವರ್ಷಗಳಲ್ಲಿ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ಹಾಗೂ ರಾಮಕೃಷ್ಣ ಭಾವಧಾರೆ ಸಂಸ್ಥೆಗಳು ಧಾರ್ಮಿಕ, ಆಧ್ಯಾತ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ವೈದ್ಯಕೀಯ, ನೆರೆ-ಬರ ಪರಿಹಾರ, ಮುಂತಾದ ಕ್ಷೇತ್ರಗಳಲ್ಲಿ ತಮ್ಮ ಅಮೋಘ ಸೇವೆಯನ್ನು ಸಲ್ಲಿಸಿವೆ. ಅಧ್ಯಾತ್ಮ ಮತ್ತು ಸೇವೆಯನ್ನು ಸುಂದರವಾಗಿ ಮೈಗೂಡಿಸಿಕೊಂಡು ಹೋಗಬಹುದು ಎಂದು ಸಮಾಜಕ್ಕೆ ತಿಳಿಸಿದೆ. ಅಧ್ಯಾತ್ಮ ಎಂದರೆ ಜಗತ್ತಿನಿಂದ ವಿಮುಖರಾಗುವುದಿಲ್ಲ. ಬದಲಾಗಿ ಸಮಾಜದಲ್ಲಿದ್ದುಕೊಂಡು, ಅಂಟಿಕೊಳ್ಳದೆ, ''ಶಿವಜ್ಞಾನೇ ಜೀವ ಸೇವಾ – ಮಾನವ ಸೇವೆ ಶಿವನ ಪೂಜೆ'' ಎಂದು ತೋರಿಸಿಕೊಟ್ಟಿವೆ. ಇದರಿಂದ ಸ್ಫೂರ್ತಿಗೊಂಡು ಹಲವು ಸಂಸ್ಥೆಗಳು, ವ್ಯಕ್ತಿಗಳು ಈ ನಿಟ್ಟಿನಲ್ಲಿ ಸೇವಾಕಾರ್ಯಗಳನ್ನು ಸಮಾಜಹಿತ-ದೇಶವನ್ನು ಕಟ್ಟುವ ಕೆಲಸಗಳಲ್ಲಿ ತೊಡಗಿದ್ದಾರೆ.

ರಾಮಕೃಷ್ಣ ಮಠದ ಅಂಗ ಸಂಸ್ಥೆಯಾದ ಶ್ರೀರಾಮಕೃಷ್ಣ ಆಶ್ರಮ, ಮೈಸೂರು ೨೦೨೫ರಲ್ಲಿ ತನ್ನ ಶತಮಾನೋತ್ಸವನ್ನು ಆಚರಿಸುತ್ತಿರುವುದು ನಮಗೆಲ್ಲ ಸಂತೋಷ ಹೆಮ್ಮೆಯ ವಿಷಯವೇ ಸರಿ. ರಾಷ್ಟ್ರಕವಿ ಕುವೆಂಪು ಹೇಳಿರುವಂತೆ ರಾಮಕೃಷ್ಣ ಆಶ್ರಮಗಳು ಯಾವುದೇ ಪ್ರಚಾರದ ಗೀಳಿಗೆ ಹೋಗದೆ, ತಮ್ಮ ಅಮೋಘ ಸೇವೆಯನ್ನು ಸಲ್ಲಿಸುತ್ತಿವೆ. ಅದೇ ರೀತಿ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಯಾವುದೇ ಪ್ರಚಾರದ ಗೀಳಿಗೆ ಹೋಗದೆ ೧೦೦ ವರ್ಷಗಳಿಂದ ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ, ಮುಖ್ಯವಾಗಿ ಶೈಕ್ಷಣಿಕ ಮತ್ತು ಸಾಹಿತ್ಯ ಸೇವೆಯನ್ನು ಅಮೋಘವಾಗಿ ಮಾಡಿಕೊಂಡು ಬರುತ್ತಿರುವುದು ನಮಗೆಲ್ಲ ತಿಳಿದ ವಿಷಯವೇ ಸರಿ.

### ಸಂಘಟನೆ

'ಸ್ವಯಂ-ಸಂರಚಿತ ಸಂಸ್ಥೆಯು ನಮ್ಮ ಕಾಲದ ಪ್ರಮುಖ ಅಗತ್ಯ. ನಾವು ಅದನ್ನು ಪಡೆದಾಗ, ಅದು ಜಗತ್ತಿನ ಕೊನೆಯ ಧರ್ಮವಾಗುವುದು. ಚಕ್ರವು ತಿರುಗುತ್ತಿರಬೇಕು, ನಾವು ಅದಕ್ಕೆ



ವಿದ್ಯಾರ್ಥಿ ಶಿಬಿರ, ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ, ಮೈಸೂರು

ಅದು ತಿರುಗಲು ಸಹಾಯ ಮಾಡಬೇಕು, ಅಡ್ಡಿಪಡಿಸಬಾರದು. ಧಾರ್ಮಿಕ ಚಿಂತನೆಯ ಅಲೆಗಳು ಏರುತ್ತವೆ, ಇಳಿಯುತ್ತವೆ. ಆದರೆ ತುದಿಯಲ್ಲಿ 'ಯುಗದ ಪ್ರವರ್ತಕ'ನಿರುತ್ತಾನೆ. ರಾಮಕೃಷ್ಣರು ಇಂದಿನ ಧರ್ಮವನ್ನು ಉಪದೇಶಿಸಲು ಬಂದಿದ್ದಾರೆ, ಅದು ನಿರ್ಮಾಣಾತ್ಮಕ, ವಿನಾಶಕಾರಿ ಅಲ್ಲ' - ಸ್ವಾಮಿ ವಿವೇಕಾನಂದರು. ಈ ಮೇಲಿನ ಸ್ವಾಮೀಜಿಯ ನುಡಿಗಳಲ್ಲಿ, ಸಂಘಟನೆಯ ಪ್ರಾಮುಖ್ಯತೆಯನ್ನು ನಾವು ಚೆನ್ನಾಗಿ ತಿಳಿಯಬಹುದು.

ವಿಶೇಷವಾಗಿ ಯುವಕ-ಯುವತಿಯರು ಸಂಘಟಿತರಾಗಬೇಕು. ಮಾನವ ನಿರ್ಮಾಣ ಮತ್ತು ದೇಶವನ್ನು ಕಟ್ಟುವ ನಿಟ್ಟಿನಲ್ಲಿ ಇವರುಗಳು ಸಕ್ರಿಯವಾಗಿ ಭಾಗವಹಿಸಬೇಕು ಎಂಬುದು ಸ್ವಾಮೀಜಿಯವರ ಆಶಯವಾಗಿತ್ತು. ಯುವಕ-ಯುವತಿಯರು ತಮ್ಮ ವ್ಯಕ್ತಿತ್ವವನ್ನು ನಿರ್ಮಾಣ ಮಾಡಿಕೊಳ್ಳದ ಹೊರತು, ಸಮಾಜ ನಿರ್ಮಾಣ ಸಾಧ್ಯವಿಲ್ಲ. ವಿವೇಕಯುಕ್ತ, ಶಕ್ತಿದಾಯಕ, ಉತ್ಸಾಹದಾಯಕ, ನಿಃಸ್ವಾರ್ಥ, ದೇಶಪ್ರೇಮವುಳ್ಳ ಯುವಕ ಸಮೂಹದಿಂದ ದೇಶ ಕಟ್ಟಲು ಸಾಧ್ಯ. ಈ ನಿಟ್ಟಿನಲ್ಲಿ ನಾವು ಮೊದಲು ಕಾರ್ಯೋನ್ಮುಖರಾಗಬೇಕೆಂದು ಸ್ವಾಮೀಜಿ ತಿಳಿಸಿದ್ದಾರೆ.

''ವಿದ್ಯಾವಂತ ಯುವಕರ ಮೇಲೆ ಕೇಂದ್ರೀಕರಿಸಿ ಕಾರ್ಯನಿರ್ವಹಿಸಿ, ಅವರನ್ನು ಒಟ್ಟುಗೂಡಿಸಿ, ಸಂಘಟಿಸಿ, ಮಹತ್ವದ ತ್ಯಾಗಗಳಿಂದಲೇ ಮಹಾನ್ ಕಾರ್ಯಗಳನ್ನು ಸಾಧಿಸಬಹುದು. ಸ್ವಾರ್ಥ ಬೇಡ, ಹೆಸರು-ಕೀರ್ತಿಗಳು ಬೇಡ, ಉದಾತ್ತಾದ ಮಹಾನ್ ಚಿಂತನೆಗಾಗಿ ನನ್ನ ಮಕ್ಕಳೇ, ಕೆಲಸ ಮಾಡೋಣ... ಹುಲ್ಲನ್ನು ಒಟ್ಟಾಗಿ ಜೋಡಿಸಿ ಕಟ್ಟಿ ಹಗ್ಗ ಮಾಡಿದರೆ, ಅದರಿಂದ ಒಂದು ಹುಚ್ಚು ಆನೆಯನ್ನು ಕೂಡ ಕಟ್ಟಬಹುದು.''

ಪ್ರಜ್ಞಾವಂತ ನಾಗರಿಕ ಸಮಾಜದ ನಿರ್ಮಾಣಕ್ಕಾಗಿ, ವಿವೇಕಯುಕ್ತ, ಯುವಕ-ಯುವತಿಯರ ಸಮೂಹದ ಅಗತ್ಯವಿದೆ. ಆದರೆ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಲು ಬಾಲಕ ಸಂಘ, ಬಾಲಿಕಾ ಸಂಘ, ಯುವಕ ಸಂಘ, ತರುಣ ಸಂಘಗಳನ್ನು ರಾಮಕೃಷ್ಣ ಮಠದ ಶಾಖಾ ಕೇಂದ್ರಗಳು ಹಲವು ದಶಕಗಳಿಂದ ನಡೆಸುತ್ತಿವೆ.

### ಯುವ ತರಬೇತಿ, ಬಾಲಕ ಸಂಘ-ಯುವಕ ಸಂಘ

೧೯೫೩ರಲ್ಲಿ ಪರಮಪೂಜ್ಯ ಸ್ವಾಮಿ ಯತೀಶ್ವರಾನಂದಜಿಯವರು ಬೆಂಗಳೂರಿನ ಬಸವನಗುಡಿ ರಾಮಕೃಷ್ಣ ಮಠದಲ್ಲಿ ಬಾಲಕರ ಹಾಗೂ ಯುವಕರ ತರಬೇತಿಗೆಂದು ಬಾಲಕ ಸಂಘ ಮತ್ತು ಯುವಕ ಸಂಘವನ್ನು ಪ್ರಾರಂಭಿಸಿದರು. ಸ್ವಾಮಿ ಶಾಸ್ತ್ರಾನಂದಜಿ, ಸ್ವಾಮಿ ಹರ್ಷಾನಂದಜಿ, ಸ್ವಾಮಿ ಚಿದಾನಂದಜಿ, ಸ್ವಾಮಿ ಪುರುಷೋತ್ತಮಾನಂದಜಿ ಮುಂತಾದ ಸಂನ್ಯಾಸಿಗಳು ಇದರ ಮೇಲ್ವಿಚಾರಣೆಯನ್ನು ನಡೆಸಿದ್ದಾರೆ. ವೇದ ಪಠಣ, ಭಜನೆ, ಗೀತಾಪಠಣ, ದಿವ್ಯತ್ರಯರ ಜೀವನಸಂದೇಶಗಳ ಅಧ್ಯಯನ, ರಾಮಾಯಣ, ಮಹಾಭಾರತ ಗ್ರಂಥಗಳ ಕುರಿತು ತಿಳಿವಳಿಕೆ, ಮುಂತಾದ ಕಾರ್ಯಕ್ರಮಗಳು ಇದರ ಭಾಗವಾಗಿದೆ. ಇದಲ್ಲದೆ ಆಶ್ರಮಗಳ ವಿವಿಧ ಕಾರ್ಯಕ್ರಮಗಳಲ್ಲಿ ಸ್ವಯಂಸೇವಕರಾಗಿ ಇವರು ಸೇವೆಯನ್ನು ಸಲ್ಲಿಸುತ್ತಾರೆ.


ಬಾಲಕ ಸಂಘ, ಯುವಕ ಸಂಘಗಳನ್ನು ಬಹುತೇಕ ಆಶ್ರಮಗಳಲ್ಲಿ ನಡೆಸುತ್ತಿದ್ದು, ಇದರಿಂದ ಪ್ರಜ್ಞಾವಂತ ನಾಗರಿಕ, ವಿವೇಕಯುಕ್ತ ಯುವಸಮೂಹವನ್ನು ನಿರ್ಮಾಣ ಮಾಡುವುದರಲ್ಲಿ ಯಶಸ್ಸು ಕಂಡಿದೆ ಎಂದು ಹೇಳಬಹುದು. ಇದರಲ್ಲಿ ತರಬೇತಿ ಪಡೆದ ಮಕ್ಕಳು, ಯುವಕರು ತಮ್ಮ ಜೀವನವನ್ನು ಉತ್ತಮಗೊಳಿಸಿಕೊಳ್ಳುವುದಲ್ಲದೆ, ದೇಶನಿರ್ಮಾಣ ಸೇವಾಕಾರ್ಯಗಳಲ್ಲಿ ಹಲವರು ತೊಡಗಿಕೊಂಡಿದ್ದಾರೆ. ಅನೇಕರು ಸ್ಫೂರ್ತಿಗೊಂಡು ಸಂನ್ಯಾಸಿಗಳಾಗಿರುವುದು ವಿಶೇಷ ಸಂಗತಿ.


### ಯುವ ಶಿಬಿರ


ರಾಮಕೃಷ್ಣ ಮಠಗಳು ಒಂದು ಎರಡು ಅಥವಾ ಮೂರು ದಿವಸಗಳ ಶಿಬಿರ, ಹಾಗೂ ಅನೇಕ ವಸತಿ ಶಿಬಿರಗಳನ್ನು ಹಮ್ಮಿಕೊಂಡಿವೆ. ಇದರಲ್ಲಿ ಸಂನ್ಯಾಸಿಗಳು, ಉತ್ತಮ ವಾಗ್ಮಿಗಳು, ಪಂಡಿತರುಗಳಿಂದ ಅನೇಕ ವಿಚಾರ ವಿನಿಮಯಗಳು ನಡೆಯುತ್ತವೆ. ಧ್ಯಾನದ ತರಬೇತಿಯನ್ನು ಕುರಿತು ಕಾರ್ಯಾಗಾರಗಳನ್ನು ಆಗಿಂದಾಗ್ಗೆ ಆಯೋಜಿಸಲಾಗುತ್ತದೆ. ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಲ್ಲಿ ಯುವಕರಿಗಾಗಿ ಇತ್ತೀಚೆಗೆ ಕೆಲವು ಕಾಲ ಡಿಪ್ಲೋಮಾ ತರಗತಿಗಳನ್ನು ನಡೆಸುತ್ತಿದ್ದರು.


### ವ್ಯಕ್ತಿತ್ವ ವಿಕಸನ


ಜೀವನ ಕೌಶಲಗಳು, ಮೌಲ್ಯಗಳು, ವೃತ್ತಿ ಕೌಶಲಗಳನ್ನು ಯುವ ಶಿಬಿರಗಳಲ್ಲಿ ಕಲಿಸಲಾಗುತ್ತದೆ.












### ಸಾಹಿತ್ಯ ಸೇವೆ

ಕರ್ನಾಟಕದಲ್ಲಿ, ಕನ್ನಡ ಭಾಷೆಗೆ ಹಾಗೂ ಸಾಹಿತ್ಯಕ್ಕೆ ರಾಮಕೃಷ್ಣ ವಿವೇಕಾನಂದ ಸಾಹಿತ್ಯವು ಅಮೋಘವಾಗಿ ಸೇವೆಯನ್ನು ಸಲ್ಲಿಸಿದೆ. ಬದುಕಲು ಕಲಿಯಿರಿ, ವಿದ್ಯಾರ್ಥಿಗಾಗಿ, ಯುವ ಶಕ್ತಿಯ ರಹಸ್ಯ, ಶಕ್ತಿಶಾಲಿ ವ್ಯಕ್ತಿತ್ವ ನಿರ್ಮಾಣ ಮುಂತಾದ ಹಲವು ರಾಮಕೃಷ್ಣ ಆಶ್ರಮದ ಪ್ರಕಟಣೆಗಳು ಯುವ ಸಮೂಹಕ್ಕೆ ದಾರಿದೀಪವಾಗಿವೆ. ಅವರಿಗೆ ಉತ್ತಮ ಮಾರ್ಗದರ್ಶನ ಸಿಗುವುದರ ಜೊತೆಗೆ, ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುವುದು, ವ್ಯಕ್ತಿತ್ವವನ್ನು ನಿರ್ಮಾಣ ಮಾಡಿಕೊಳ್ಳುವ ಬಗೆ, ಕೀಳರಿಮೆಯಿಂದ ಹೊರಬರುವ ವಿಚಾರಗಳನ್ನು ಉತ್ತಮವಾಗಿ ತಿಳಿಸುವ ಪುಸ್ತಕ ಭಂಡಾರವನ್ನೂ ನೀಡಿದೆ.

ಬಾಲಕ-ಬಾಲಕಿಯರಿಗೆ ರಾಮಕೃಷ್ಣ ಮಠಗಳು ವಸಂತ ಶಿಬಿರ (ಬೇಸಿಗೆ ಶಿಬಿರ)ವನ್ನೂ ಆಯೋಜಿಸುತ್ತವೆ. ಇದರಿಂದಾಗಿ ಬೇಸಿಗೆ ರಜಾದಿನಗಳನ್ನು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸದುಪಯೋಗ ಮಾಡಿಕೊಳ್ಳಬಹುದು. ಈ ಶಿಬಿರಗಳು ಅವರುಗಳಲ್ಲಿ ಅನೇಕ ಬದಲಾವಣೆ ತರುವುದರಲ್ಲಿ ಯಾವುದೇ ಸಂದೇಹವಿಲ್ಲ. ಈ ಶಿಬಿರಗಳಲ್ಲಿ, ಅನೇಕ ಆಶ್ರಮಗಳು 'ಮಾತೃವಂದನಾ - ತಾಯಿಯರನ್ನು ಪೂಜಿಸುವುದು' ಕಾರ್ಯಕ್ರಮವನ್ನು ಆಯೋಜಿಸುವುದರ ಮೂಲಕ, ತಂದೆ-ತಾಯಿಯರನ್ನು ಗೌರವದಿಂದ ಕಾಣಬೇಕು ಎಂಬ ಮುಖ್ಯ ಪಾಠವನ್ನು ತಿಳಿಸಿಕೊಡುವ ಪ್ರಯತ್ನವನ್ನು ಮಾಡುತ್ತಿವೆ.

### ಮೌಲ್ಯವರ್ಧನ ಶಿಬಿರಗಳು

ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ (RIMSE) ಮೈಸೂರು ವರ್ಷವಿಡೀ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಹಲವಾರು ಶಿಬಿರಗಳನ್ನು ಆಯೋಜಿಸುತ್ತಿವೆ. ಇದರಿಂದ ಏಕಾಗ್ರತಾ ಮಟ್ಟವು ವಿದ್ಯಾರ್ಥಿಗಳಲ್ಲಿ ಹೆಚ್ಚಾಗುತ್ತದೆ. ಭಾರತೀಯ ಸಂಸ್ಕೃತಿ ಮತ್ತು ಉತ್ತಮವಾದ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಬಗೆಯನ್ನು ತಿಳಿಸಿಕೊಡುವುದರ ಮೂಲಕ, ಅವರ ವ್ಯಕ್ತಿತ್ವವನ್ನು ಉತ್ತಮವಾಗಿಸಿಕೊಳ್ಳಲು ಸಹಕಾರಿಯಾಗಿದೆ.

### ಸೇವೆ

ಆಶ್ರಮಗಳಲ್ಲಿ ಅನೇಕ ಯುವಕ-ಯುವತಿಯರು ಸಂನ್ಯಾಸಿಗಳ ಮಾರ್ಗದರ್ಶನದಲ್ಲಿ, ಹಿರಿಯರ ನೆರವಿನೊಂದಿಗೆ ವಿವಿಧ ರೀತಿಯ ಸೇವಾ ಚಟುವಟಿಕೆಗಳನ್ನು ಕೈಗೊಳ್ಳುತ್ತಾರೆ. ಇದರಿಂದ ಅವರಲ್ಲಿ ಸ್ವಾರ್ಥ ಮನೋಭಾವ ಕ್ಷೀಣಿಸಿ, ನಿಸ್ವಾರ್ಥ ಭಾವವು ಹೆಚ್ಚಾಗುತ್ತಿದೆ. ಇದರಿಂದ ಸಮಾಜದ ಶ್ರೇಯಸ್ಸು ಉಂಟಾಗುತ್ತದೆ.

ಸ್ವಾಮಿ ವಿವೇಕಾನಂದರು ಮೈಸೂರಿನ ಮಹಾರಾಜರಿಗೆ ಬರೆದ ಪತ್ರದಲ್ಲಿ, ''ಯಾರು ಇತರರಿಗೋಸ್ಕರ ಬದುಕುತ್ತಾರೋ, ಅವರ ನಿಜವಾಗಲೂ ಬದುಕಿದಂತೆ, ಉಳಿದವರು ಬದುಕಿದ್ದರೂ ಸತ್ತಂತೆ'' ಎಂದು ಹೇಳುತ್ತಾರೆ.

ಸೇವಾಕೈಂಕರ್ಯ ಯುವ ಸಮೂಹವು ಅನೇಕ ವಿಷಯಗಳಲ್ಲಿ ಪರಿಣತಿಯನ್ನು ಪಡೆಯುವುದಲ್ಲದೆ, ಅವರು ಸಮಯಪರಿಪಾಲನೆ, ಕರ್ಮ ಕುಶಲತೆ, ಸ್ವಚ್ಛತೆಗಳನ್ನು ಚೆನ್ನಾಗಿ ಮೈಗೂಡಿಸಿಕೊಳ್ಳುತ್ತಾರೆ.

ಕರ್ನಾಟಕದಲ್ಲಿನ ರಾಮಕೃಷ್ಣ ಮಠ ಹಾಗೂ ಇತರೆ ಭಾವಪ್ರಚಾರ ಪರಿಷತ್ತಿನ ಆಶ್ರಮಗಳು ಸಾವಿರಾರು ಯುವಕ-ಯುವತಿಯರ ವ್ಯಕ್ತಿತ್ವ ನಿರ್ಮಾಣ ಕಾರ್ಯದಲ್ಲಿ ಉತ್ತಮ ಪಾತ್ರವನ್ನು ವಹಿಸಿವೆ.

ಅವರುಗಳಲ್ಲಿ ನೈತಿಕ, ಸಾಮಾಜಿಕ, ಆಧ್ಯಾತ್ಮಿಕ ಮೌಲ್ಯಗಳ ವರ್ಧನೆಗೆ ಅಹರ್ನಿಶಿ ಶ್ರಮಿಸುತ್ತಿವೆ. ಯುವ ಸಮೂಹದಲ್ಲಿ ಸಾಮಾಜಿಕ ಹೊಣೆಗಾರಿಕೆ, ದೇಶಭಕ್ತಿ ರೂಪಿಸುವಲ್ಲಿ ಈ ಪ್ರೇರಣೆಗಳನ್ನು ನೀಡುತ್ತಾಬಂದಿದೆ. ರಾಮಕೃಷ್ಣ ಮಠಗಳು ಯುವಜನತೆಗೆ ಮಾರ್ಗದರ್ಶನದ ನಂದಾದೀಪವಾಗಿ ತಮ್ಮ ಪಾತ್ರವನ್ನು ಉತ್ತಮವಾಗಿ ನಿರ್ವಹಿಸುತ್ತಿವೆ. ✽

## ಸೂಕ್ತಿಗಳು

ಹೇಗೆ ನಿನಗೆ ದುಃಖವು ಪ್ರಿಯವಲ್ಲವೋ, ಹಾಗೆಯೆ ಎಲ್ಲ ಜೀವಿಗಳಿಗೂ ದುಃಖವು ಪ್ರಿಯವಲ್ಲ - ಹೀಗೆಂದು ತಿಳಿದು ಮತ್ತು ಎಚ್ಚರಿಕೆಯಿಂದ ಎಲ್ಲರನ್ನೂ ತನ್ನಂತೆ ನೋಡುತ್ತ ಎಲ್ಲರ ಮೇಲೂ ದಯೆ ತೋರಿಸು.

— ಮಹಾವೀರ

ಅಗ್ನಿಯ ಹಲವು ಜ್ವಾಲೆಗಳನ್ನು ಹತ್ತಿರ ತಂದಾಗ ಅವೆಲ್ಲ ಒಂದಾಗುವಂತೆ, ಹಲವು ಜೀವಗಳು ಒಂದಾದಾಗ ಪರಮಾತ್ಮವಾಗುವುದು.

— ಝುರತುಷ್ಟ್ರ